<u>ತೀರ್ಥಹಳ್ಳಿಯ 1 ನೇ ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಯವರ ನ್ಯಾಯಾಲಯದಲ್ಲಿ</u>

<u>ಸಿ.ಸಿ. ನಂ.**01/2018.**</u>

ಪಿರ್ಯಾದುದಾರರು : ರಾಜ್ಯದ ಪರವಾಗಿಃ ಮಾಳೂರು ಪೊಲೀಸ್.

-ವಿರುದ್ಧ-

ಆರೋಪಿ : ಜಿ.ಎಂ.ಹಸ್ಸೈನಾರ್ ಬಿನ್ ದಿಃ ಮೊಸಬಾ ಬ್ಯಾರಿ,
ವಾಸಃ ಶಿವಾಜಿನಗರ, ಕುವೆಟ್ಟು,
ಬೆಳ್ತಂಗಡಿ ತಾಲ್ಲೂಕು, ದಕ್ಷಿಣ ಕನ್ನಡ ಜಿಲ್ಲೆ.

<u>ಭಾ ದಂ ಪ್ರ ಸಂ ಕಲಂ.**313** ರ ಅಡಿಯಲ್ಲಿ ಆರೋಪಿ ಹೇಳಿಕೆ</u>

ಪ್ರ:1: ಈ ಮೊಕದ್ದಮೆಯಲ್ಲಿ ವಿಚಾರಣೆ ಆಗಿರುವ ಅಭಿಯೋಜನೆ ಪರ ಸಾಕ್ಷಿದಾರರ ಹೇಳಿಕೆಯನ್ನು ಕೇಳಿಸಿಕೊಂಡಿದ್ದೀರಾ?
ಉಃ

ಪ್ರ:2: ಫ್ರಾಸಾ-1, ಹೆಚ್.ಪಿ.ಲಕ್ಷ್ಮಪ್ಪ ರವರು ತಮ್ಮ ಸಾಕ್ಷ್ಯದಲ್ಲಿ ದಿಃ04-04-2016 ರಂದು ರಾತ್ರಿ ಸಮಯದಲ್ಲಿ ಅವರು ಚಾಸಾ-2 ರಿಂದ 5 ರವರು ಕಿಕ್ಕೇರಿ ಮಾರ್ಗವಾಗಿ ಗಸ್ತು ಮಾಡುತ್ತಿರುವಾಗ ಬೆಳಗಿನ ಜಾವ 05.30 ಕ್ಕೆ ಚಾಸಾ-7 ರವರು ದೂರವಾಣಿ ಕರೆ ಮಾಡಿ ಕಿಕ್ಕೇರಿ ಗ್ರಾಮದ ಸರ್ವೆ ನಂ.35/2 ರ ಕಪ್ಪೆಹೊಂಡ ಅರಣ್ಯ ಪ್ರದೇಶದಲ್ಲಿ ಮರ ಕಡಿತಲೆ ಮಾಡಿರುತ್ತಾರೆ ಎಂದು ತಿಳಿಸಿದ್ದು, ನಂತರ ಅವರುಗಳು ಸದರಿ ಸ್ಥಳಕ್ಕೆ ಭೇಟಿ ನೀಡಿ ಪರಿಶಿಲಿಸಿದಾಗ ಸದರಿ ಸ್ಥಳದಲ್ಲಿ ಒಂದು ವಾಹನ ಹೋಗಿರುವ ನಿಶಾನೆ ಕಂಡುಬಂದಿದ್ದು ನಂತರ ಸದರಿ ವಾಹನ ಹೋದ ನಿಶಾನೆಯನ್ನು ಅನುಸರಿಸಿ ಹೋಗುವಾಗ ಸದರಿ ದಾರಿಯಲ್ಲಿ ಚಿಕ್ಕ-ಚಿಕ್ಕ ಗಿಡಗಳನ್ನು ಕಡಿದ ನಿಶಾನೆ ಕಂಡುಬಂದಿರುತ್ತದೆ ಎಂದು ಸಾಕ್ಷ್ಯ ನುಡಿದಿರುತ್ತಾರೆ. ಇದಕ್ಕೆ ನೀವು ಏನು ಹೇಳುವಿರಿ?
ಉಃ

ಪ್ರ:3: ಫ್ರಾಸಾ-1 ರವರು ಮುಂದುವರೆದು ತಮ್ಮ ಸಾಕ್ಷ್ಯದಲ್ಲಿ ಸದರಿ ಸಮಯದಲ್ಲಿ ಕೆಲವು ಆಸಾಮಿಗಳು ವಾಹನಕ್ಕೆ ಮರದ ತುಂಡುಗಳನ್ನು ತುಂಬುತ್ತಿರುವ ಶಬ್ದ ಬಂದಿದ್ದು ಆಗ ಅವರುಗಳು ತಮ್ಮ ಕೈಯಲ್ಲಿದ್ದ ಬ್ಯಾಟರಿಯ ಸಹಾಯದಿಂದ ನೋಡಲಾಗಿ ಸದರಿ 05 ಜನ ಆಸಾಮಿಗಳು ಕಾಡಿನಲ್ಲಿ ಓಡಿ ಹೋಗಿದ್ದಾಗಿ, ಸದರಿ ಸ್ಥಳದಿಂದ ಓಡಿ ಹೋದ 05 ಜನ ಆಸಾಮಿಗಳು ಯಾರು ಎಂದು ಅವರಿಗೆ ತಿಳಿದಿರುವುದಿಲ್ಲವೆಂದು, ನಂತರ ಅವರುಗಳು ಸದರಿಯವರನ್ನು ಹಿಡಿಯಲು ಪ್ರಯತ್ನಿಸಿದ್ದು ಆದರೆ ಸದರಿಯವರು ಕಾಣೆಯಾಗಿರುತ್ತಾರೆಂದು ಸಾಕ್ಷ್ಯ ನುಡಿದಿರುತ್ತಾರೆ. ಇದಕ್ಕೆ ನೀವು ಏನು ಹೇಳುವಿರಿ?
ಉಃ

ಪ್ರ:4: ಫ್ರಾಸಾ-1 ರವರು ಮುಂದುವರೆದು ತಮ್ಮ ಸಾಕ್ಷ್ಯದಲ್ಲಿ ನಂತರ ಸ್ಥಳದಲ್ಲಿ ನಿಂತಿದ್ದ ವಾಹನ ಬಳಿ ಬಂದು ಪರಿಶೀಲಿಸಿ ನೋಡಿದಾಗ ಸದರಿ ಸ್ವರಾಜ್ ಮಾಜ್ದ ವಾಹನದಲ್ಲಿ 05 ತುಂಡುಗಳು ಇದ್ದುದ್ದು ಕಂಡುಬಂದಿದ್ದು ನಂತರ ಸದರಿ ತುಂಡುಗಳ ವಾಸನೆ ಮತ್ತು ಗುಣಧರ್ಮದ ಆಧಾರದ ಮೇಲೆ ಅವುಗಳು ಬೀಟೆ ತುಂಡುಗಳು ಎಂದು ತಿಳಿದುಬಂದಿದ್ದಾಗಿ ಸದರಿ ಸ್ಥಳದಲ್ಲಿ ನೆಲದ ಮೇಲೆ 19 ಬೀಟೆ ತುಂಡುಗಳು ಬಿದ್ದಿದ್ದವೆಂದು, ನಂತರ ಸದರಿ ತುಂಡುಗಳನ್ನು ಪರಿಶೀಲಿಸಿ ನೋಡಿದಾಗ ಸದರಿ ತುಂಡುಗಳ ಮೇಲೆ ಯಾವುದೇ ಇಲಾಖಾ ಚಾಪ ಕಂಡುಬಂದಿಲ್ಲದಿದ್ದರಿಂದ ಅವುಗಳನ್ನು ಅಕ್ರಮವಾಗಿ ಕಡಿತಲೆ ಮಾಡಿದ್ದರು ಎಂದು ತಿಳಿದುಬಂದಿರುತ್ತದೆ ಎಂದು ಸಾಕ್ಷ್ಯ ನುಡಿದಿರುತ್ತಾರೆ. ಇದಕ್ಕೆ ನೀವು ಏನು ಹೇಳುವಿರಿ?
ಉಃ

ಪ್ರ:5: ಫ್ರಾಸಾ-1 ರವರು ಮುಂದುವರೆದು ತಮ್ಮ ಸಾಕ್ಷ್ಯದಲ್ಲಿ ಸದರಿ ಸ್ವರಾಜ್ ಮಾಜ್ದ ವಾಹನದಿಂದ 02 ಮೀಟರ್ ದೂರದಲ್ಲಿ ಒಂದು ಬುಡ ಹಾಗೂ 20 ಮೀಟರ್ ದೂರದಲ್ಲಿ ಮತ್ತೊಂದು ಬುಡ ಕಂಡುಬಂದಿರುತ್ತದೆ ಎಂದು, ಸದರಿ ಸ್ವರಾಜ್ ಮಾಜ್ದ ವಾಹನವನ್ನು ಪರಿಶೀಲಿಸಿ ನೋಡಿದಾಗ ಸದರಿ ವಾಹನದಲ್ಲಿ ಆರ್.ಸಿ. ನಕಲು ಪ್ರತಿ ದೊರೆತಿದ್ದು ನಂತರ ಅದನ್ನು ಪರಿಶೀಲಿಸಿ ನೋಡಲಾಗಿ ಸದರಿ ವಾಹನ

ಹಸೇನಾ ಬಿನ್ ಮೊಸಾಬಾ ಬ್ಯಾರಿ ಅಂದರೆ ಆರೋಪಿಯಾದ ನಿಮಗೆ ಸಂಬಂಧಿಸಿದ್ದಾಗಿರುತ್ತದೆ ಎಂದು ಸಾಕ್ಷ್ಯ ನುಡಿದಿರುತ್ತಾರೆ. ಇದಕ್ಕೆ ನೀವು ಏನು ಹೇಳುವಿರಿ?
ಉಃ

ಪ್ರ:6: ಫ್ರಾಸಾ-1 ರವರು ಮುಂದುವರೆದು ತಮ್ಮ ಸಾಕ್ಷ್ಯದಲ್ಲಿ ನಂತರ ಸದರಿ 24 ತುಂಡುಗಳ ಮೇಲೆ ಇಲಾಖಾ ಚಾಪಾವಾದ ಕೆ.ಎನ್.ಎಫ್.ಡಿ.ಜಿ.118.ಎಫ್.ಎಫ್. ಎಂದು ಮುದ್ರಿಸಿ ನಂತರ ಸದರಿ ತುಂಡುಗಳಿಗೆ 01 ರಿಂದ 24 ಎಂದು ಕ್ರಮ ಸಂಖ್ಯೆ ನೀಡಿರುವುದಾಗಿ ನಂತರ ವಾಹನಕ್ಕೆ ಕ್ರಮ ಸಂಖ್ಯೆ: 25 ಎಂದು ನೀಡಿದ್ದಾಗಿ, ವಾಹನ ದಾಖಲಾತಿಗೆ ಕ್ರಮ ಸಂಖ್ಯೆ: 26 ಎಂದು ನೀಡಿರುತ್ತಾರೆಂದು ಸಾಕ್ಷ್ಯ ನುಡಿದಿರುತ್ತಾರೆ. ಇದಕ್ಕೆ ನೀವು ಏನು ಹೇಳುವಿರಿ?
ಉಃ

ಪ್ರ:7: ಫ್ರಾಸಾ-1 ರವರು ಮುಂದುವರೆದು ತಮ್ಮ ಸಾಕ್ಷ್ಯದಲ್ಲಿ ನಂತರ ಬೆಳಗ್ಗೆ 06.30 ರಿಂದ 07.30 ರ ವರೆಗೆ ಇಲಾಖಾ ಸಿಬ್ಬಂದಿಗಳ ಸಮಕ್ಷಮದಲ್ಲಿ ಪಂಚನಾಮೆಯನ್ನು ಜರುಗಿಸಿ ಸದರಿ ತುಂಡುಗಳನ್ನು ಮತ್ತು ವಾಹನವನ್ನು ಅಮಾನತ್ತುಪಡಿಸಿಕೊಂಡು ಸದರಿ ಸಮಯದಲ್ಲಿ ಸ್ಥಳೀಯರು ಯಾರೂ ದೊರೆತಿರದ ಕಾರಣ ಅವರ ಇಲಾಖಾ ಸಿಬ್ಬಂದಿಗಳೇ ಪಂಚರಾಗಿ ಸಹಿ ಮಾಡಿರುತ್ತಾರೆಂದು, ಅವರು ತಮ್ಮ ಕಛೇರಿಗೆ ದೂರವಾಣಿ ಕರೆ ಮಾಡಿ ಎಫ್.ಓ.ಸಿ ಸಂಖ್ಯೆಯನ್ನು ಪಡೆದುಕೊಂಡು ನಂತರ ಅಮಾನತ್ತುಪಡಿಸಿಕೊಂಡ ತುಂಡುಗಳನ್ನು ಸದರಿ ವಾಹನದಲ್ಲಿ ಅವರ ಕಛೇರಿ ಆವರಣಕ್ಕೆ ತೆಗೆದುಕೊಂಡು ಹೋಗಿರುತ್ತಾರೆಂದು ನಂತರ ಪಂಚನಾಮೆಯನ್ನು ಚಾಸಾ-2 ರವರು ಬರೆದಿದ್ದು ಸ್ಥಳದಲ್ಲಿಯೇ ಪ್ರಥಮ ವರ್ತಮಾನ ವರದಿಯನ್ನು ಮತ್ತು ಜಪ್ತು ವರದಿಯನ್ನು ತಯಾರಿಸಿರುವುದಾಗಿ ಸಾಕ್ಷ್ಯ ನುಡಿದಿರುತ್ತಾರೆ. ಇದಕ್ಕೆ ನೀವು ಏನು ಹೇಳುವಿರಿ?
ಉಃ

ಪ್ರ:8: ಫ್ರಾಸಾ-1 ರವರು ಮುಂದುವರೆದು ತಮ್ಮ ಸಾಕ್ಷ್ಯದಲ್ಲಿ ಎಫ್.ಓ.ಸಿ. ಸಂಖ್ಯೆ:01/2016-17 ದಿಃ04-04-2016 ಕ್ಕೆ ಸಂಬಂಧಿಸಿದಂತೆ ಕಿಕ್ಕೇರಿ ಸರ್ವೆ ನಂ.35/2 ರ ಅರಣ್ಯ ಪ್ರದೇಶದಲ್ಲಿ ಹಳದಿ ಕಲರ್ ನ ಸ್ವರಾಜ್ ಮಜ್ದ ವಾಹನದಲ್ಲಿ ಬೀಟೆ ತುಂಡುಗಳು ದೊರಕಿರುತ್ತವೆ ಎಂದು, ಸದರಿ ವಿಚಾರವಾಗಿ ದಿಃ05-04-2016 ರಂದು ಎ.ಸಿ.ಎಫ್. ಮತ್ತು ಆರ್.ಎಫ್.ಓ. ರವರೊಂದಿಗೆ ಸ್ಥಳ ಪರಿಶೀಲನೆಗಾಗಿ ಹೋಗಿದ್ದಾಗಿ ಸದರಿ ಸ್ಥಳ ಪರಿಶೀಲನೆ ಮಾಡಿ ನೋಡಲಾಗಿ ಸ್ಥಳದಲ್ಲಿ 02 ಮರಗಳನ್ನು ಕಡಿದ ಬುಡ ಕಂಡುಬಂದಿರುತ್ತದೆ ಎಂದು ಹಾಗೂ ಸದರಿ ಸ್ಥಳದಲ್ಲಿ ರೆಂಬೆ ಕೊಂಬೆಗಳು ಬಿದ್ದಿದ್ದು ಅವರ ಸಿಬ್ಬಂದಿಯವರಿಗೆ ಸದರಿ ರೆಂಬೆ ಕೊಂಬೆಗಳನ್ನು ಕಛೇರಿಗೆ ತೆಗೆದುಕೊಂಡು ಹೋಗುವಂತೆ ಮೌಖಿಕವಾಗಿ ಆದೇಶಿಸಿರುತ್ತಾರೆಂದು ಸಾಕ್ಷ್ಯ ನುಡಿದಿರುತ್ತಾರೆ. ಇದಕ್ಕೆ ನೀವು ಏನು ಹೇಳುವಿರಿ?
ಉಃ

ಪ್ರ:9: ಫ್ರಾಸಾ-1 ರವರು ಮುಂದುವರೆದು ತಮ್ಮ ಸಾಕ್ಷ್ಯದಲ್ಲಿ ಒಂದು ಮರದಿಂದ 02 ತುಂಡುಗಳು ದೊರಕಿದ್ದು ಅವುಗಳಿಗೆ 1/ಎ ಮತ್ತು 1/ಬಿ ಎಂದು ಹಾಗೂ ಎರಡನೇ ಮರದಿಂದ ದೊರೆತ 03 ತುಂಡುಗಳಿಗೆ 2/ಸಿ, 2/ಡಿ ಮತ್ತು 2/ಇ ಎಂದು ನಮೂದಿಸಿದ್ದಾಗಿ, ಸದರಿ ತುಂಡುಗಳ ಮೇಲೆ ಇಲಾಖಾ ಛಾಪಾವಾದ ಕೆ.ಎನ್.ಎಫ್.ಡಿ.ಜಿ.118 ಎಫ್.ಎಫ್. ಮತ್ತು ಪ್ರಕರಣ ಸಂಖ್ಯೆ: ಎಫ್.ಓ.ಸಿ. ಸಂಖ್ಯೆ:01/2016-17 ಎಂದು ಮುದ್ರಿಸಲಾಗಿರುತ್ತದೆ ಎಂದು, ಸದರಿ ತುಂಡುಗಳನ್ನು ಅಳತೆ ಮಾಡಿ ನೋಡಲಾಗಿ 5=0.536 ಮೀಟರ್ ಇರುತ್ತದೆ ಎಂದು, ನಂತರ ಸ್ಥಳದಲ್ಲಿ ದೊರೆತ ತುಂಡುಗಳನ್ನು ಹಾಗೂ ಮುದ್ದೆಮಾಲುಗಳನ್ನು ಕಛೇರಿಗೆ ರವಾನಿಸಿದ್ದಾಗಿ, ಸ್ಥಳದಲ್ಲಿ ಪಂಚರಾದ ದಸ್ತಗಿರ್ ರವರ ಸಮಕ್ಷಮ ಪಂಚನಾಮೆಯನ್ನು ಜರುಗಿಸಿರುತ್ತಾರೆಂದು ಸಾಕ್ಷ್ಯ ನುಡಿದಿರುತ್ತಾರೆ. ಇದಕ್ಕೆ ನೀವು ಏನು ಹೇಳುವಿರಿ?
ಉಃ

ಪ್ರ:10: ಫ್ರಾಸಾ-2, ಸಹದೇವಪ್ಪ ಹೊಳಲ, ಅರಣ್ಯ ರಕ್ಷಕ ಹಾಗೂ ಫ್ರಾಸಾ-3, ಶಶಿಧರ.ಎನ್., ಉಪ-ವಲಯ ಅರಣ್ಯಾಧಿಕಾರಿ, ಇವರುಗಳು ತಮ್ಮ ಸಾಕ್ಷ್ಯದಲ್ಲಿ ದಿಃ04-04-2016 ರಂದು ರಾತ್ರಿ ಸಮಯದಲ್ಲಿ ಅವರುಗಳು ಹಾಗೂ ಚಾಸಾ-1, 4 ಮತ್ತು 5 ರವರು ಕಿಕ್ಕೇರಿ ಮಾರ್ಗವಾಗಿ ಗಸ್ತು ಮಾಡುತ್ತಿರುವಾಗ ಬೆಳಗಿನ ಜಾವ 05.00 ಕ್ಕೆ ಚಾಸಾ-7 ರವರು ಚಾಸಾ-1 ರವರಿಗೆ ದೂರವಾಣಿ ಕರೆ ಮಾಡಿ ಕಿಕ್ಕೇರಿ ಗ್ರಾಮದ ಕಪ್ಪೆಹೊಂಡ ಅರಣ್ಯ ಪ್ರದೇಶದಲ್ಲಿ ಮರ ಕಡಿತಲೆ ಮಾಡಿರುತ್ತಾರೆ ಎಂದು ತಿಳಿಸಿದ್ದು ನಂತರ ಅವರುಗಳು ಸದರಿ ಸ್ಥಳಕ್ಕೆ ಭೇಟಿ ನೀಡಿ ಪರಿಶಿಲಿಸಿದಾಗ ಸದರಿ ಸ್ಥಳದಲ್ಲಿ ಒಂದು ವಾಹನ ಹೋಗಿರುವ ನಿಶಾನೆ ಕಂಡುಬಂದಿದ್ದು ನಂತರ ಸದರಿ ವಾಹನ ಹೋದ ನಿಶಾನೆಯನ್ನು ಅನುಸರಿಸಿ ಹೋಗುವಾಗ ಸದರಿ

ದಾರಿಯಲ್ಲಿ ಚಿಕ್ಕ-ಚಿಕ್ಕ ಗಿಡಗಳನ್ನು ಕಡಿದ ನಿಶಾನೆ ಕಂಡುಬಂದಿರುತ್ತದೆ ಎಂದು ಸಾಕ್ಷ್ಯ ನುಡಿದಿರುತ್ತಾರೆ. ಇದಕ್ಕೆ ನೀವು ಏನು ಹೇಳುವಿರಿ?
ಉಃ

ಪ್ರ:11: ಫ್ರಾಸಾ-2 ಮತ್ತು ಫ್ರಾಸಾ-3 ರವರು ಮುಂದುವರೆದು ತಮ್ಮ ಸಾಕ್ಷ್ಯದಲ್ಲಿ ಸದರಿ ಸಮಯದಲ್ಲಿ ಕೆಲವು ಆಸಾಮಿಗಳು ವಾಹನಕ್ಕೆ ಮರದ ತುಂಡುಗಳನ್ನು ತುಂಬುತ್ತಿರುವ ಶಬ್ದ ಬಂದಿದ್ದು ಆಗ ಅವರುಗಳು ತಮ್ಮ ಕೈಯಲ್ಲಿದ್ದ ಬ್ಯಾಟರಿಯ ಸಹಾಯದಿಂದ ನೋಡಲಾಗಿ ಸದರಿ 06 ಜನ ಆಸಾಮಿಗಳು ಕಾಡಿನಲ್ಲಿ ಓಡಿ ಹೋಗಿರುತ್ತಾರೆಂದು ಸದರಿ ಸ್ಥಳದಿಂದ ಓಡಿ ಹೋದ 06 ಜನ ಆಸಾಮಿಗಳು ಯಾರು ಎಂದು ಅವರಿಗೆ ತಿಳಿದಿರುವುದಿಲ್ಲವೆಂದು, ನಂತರ ಅವರುಗಳು ಸದರಿಯವರನ್ನು ಹಿಡಿಯಲು ಪ್ರಯತ್ನಿಸಿದ್ದು ಆದರೆ ಸದರಿಯವರು ಕಾಣೆಯಾಗಿರುತ್ತಾರೆಂದು ಸಾಕ್ಷ್ಯ ನುಡಿದಿರುತ್ತಾರೆ. ಇದಕ್ಕೆ ನೀವು ಏನು ಹೇಳುವಿರಿ?
ಉಃ

ಪ್ರ:12: ಫ್ರಾಸಾ-2 ಮತ್ತು ಫ್ರಾಸಾ-3 ರವರು ಮುಂದುವರೆದು ತಮ್ಮ ಸಾಕ್ಷ್ಯದಲ್ಲಿ ನಂತರ ಸ್ಥಳದಲ್ಲಿ ನಿಂತಿದ್ದ ವಾಹನದ ಬಳಿ ಬಂದು ಪರಿಶೀಲಿಸಿ ನೋಡಿದಾಗ ಸದರಿ ಸ್ವರಾಜ್ ಮಾಜ್ದ ವಾಹನದಲ್ಲಿ 05 ತುಂಡುಗಳು ಇದ್ದುದ್ದು ಕಂಡುಬಂದಿದ್ದು ನಂತರ ಸದರಿ ತುಂಡುಗಳ ವಾಸನೆ ಮತ್ತು ಗುಣಧರ್ಮದ ಆಧಾರದ ಮೇಲೆ ಅವುಗಳು ಬೀಟೆ ತುಂಡುಗಳು ಎಂದು ತಿಳಿದುಬಂದಿರುವುದಾಗಿ ಸದರಿ ಸ್ಥಳದಲ್ಲಿ ನೆಲದ ಮೇಲೆ 19 ಬೀಟೆ ತುಂಡುಗಳು ಬಿದ್ದಿದ್ದು ನಂತರ ಸದರಿ ತುಂಡುಗಳನ್ನು ಪರಿಶೀಲಿಸಿ ನೋಡಿದಾಗ ಸದರಿ ತುಂಡುಗಳ ಮೇಲೆ ಯಾವುದೇ ಇಲಾಖಾ ಚಾಪ ಕಂಡುಬಂದಿರದಿದ್ದರಿಂದ ಅವುಗಳನ್ನು ಅಕ್ರಮವಾಗಿ ಕಡಿತಲೆ ಮಾಡಿದ್ದರು ಎಂದು ತಿಳಿದುಬಂದಿರುತ್ತದೆ ಎಂದು ಸಾಕ್ಷ್ಯ ನುಡಿದಿರುತ್ತಾರೆ. ಇದಕ್ಕೆ ನೀವು ಏನು ಹೇಳುವಿರಿ?
ಉಃ

ಪ್ರ:13: ಫ್ರಾಸಾ-2 ಮತ್ತು ಫ್ರಾಸಾ-3 ರವರು ಮುಂದುವರೆದು ತಮ್ಮ ಸಾಕ್ಷ್ಯದಲ್ಲಿ ಸದರಿ ಸ್ವರಾಜ್ ಮಾಜ್ದ ವಾಹನದಿಂದ 02 ಮೀಟರ್ ದೂರದಲ್ಲಿ ಒಂದು ಬುಡ ಹಾಗೂ 20 ಮೀಟರ್ ದೂರದಲ್ಲಿ ಮತ್ತೊಂದು ಬುಡ ಕಂಡುಬಂದಿದ್ದು ಸದರಿ ಸ್ವರಾಜ್ ಮಾಜ್ದ ವಾಹನವನ್ನು ಪರಿಶೀಲಿಸಿ ನೋಡಿದಾಗ ಸದರಿ ವಾಹನದಲ್ಲಿ ಆರ್.ಸಿ. ನಕಲು ಪ್ರತಿ ದೊರೆತಿರುತ್ತದೆ ಎಂದು, ನಂತರ ಅದನ್ನು ಪರಿಶೀಲಿಸಿ ನೋಡಲಾಗಿ ಸದರಿ ವಾಹನ ಹಸೈನಾರ್ ಬಿನ್ ಮೊಸಾಬಾ ಬ್ಯಾರಿ ಅಂದರೆ ಆರೋಪಿಯಾದ ನಿಮಗೆ ಸಂಬಂಧಿಸಿದ್ದಾಗಿರುತ್ತದೆ ಎಂದು ಸಾಕ್ಷ್ಯ ನುಡಿದಿರುತ್ತಾರೆ. ಇದಕ್ಕೆ ನೀವು ಏನು ಹೇಳುವಿರಿ?
ಉಃ

ಪ್ರ:14: ಫ್ರಾಸಾ-2 ಮತ್ತು ಫ್ರಾಸಾ-3 ರವರು ಮುಂದುವರೆದು ತಮ್ಮ ಸಾಕ್ಷ್ಯದಲ್ಲಿ ನಂತರ ಸದರಿ ವ್ಯಕ್ತಿಯಾದ ನಿಮ್ಮ ವಿರುದ್ಧ ಮತ್ತು ಇನ್ನಿತರೆ 05 ಜನರ ವಿರುದ್ಧ ಪ್ರಕರಣ ದಾಖಲು ಮಾಡಿ ನಂತರ ಸದರಿ 24 ತುಂಡುಗಳ ಮೇಲೆ ಇಲಾಖಾ ಚಾಪಾವಾದ ಕೆ.ಎನ್.ಎಫ್.ಡಿ.ಜಿ.118.ಎಫ್.ಎಫ್. ಎಂದು ಮುದ್ರಿಸಲಾಗಿರುತ್ತದೆ ಎಂದು, ನಂತರ ಸದರಿ ತುಂಡುಗಳಿಗೆ 01 ರಿಂದ 24 ಎಂದು ಕ್ರಮ ಸಂಖ್ಯೆ ನೀಡಿ ನಂತರ ವಾಹನಕ್ಕೆ ಕ್ರಮ ಸಂಖ್ಯೆ 25 ಎಂದು ನೀಡಿ ವಾಹನ ದಾಖಲಾತಿಗೆ ಕ್ರಮ ಸಂಖ್ಯೆ 26 ಎಂದು ನೀಡಿರುವುದಾಗಿ ಸಾಕ್ಷ್ಯ ನುಡಿದಿರುತ್ತಾರೆ. ಇದಕ್ಕೆ ನೀವು ಏನು ಹೇಳುವಿರಿ?
ಉಃ

ಪ್ರ:15: ಫ್ರಾಸಾ-2 ಮತ್ತು ಫ್ರಾಸಾ-3 ರವರು ಮುಂದುವರೆದು ತಮ್ಮ ಸಾಕ್ಷ್ಯದಲ್ಲಿ ನಂತರ ಬೆಳಗ್ಗೆ 06.30 ರಿಂದ 08.00 ರ ವರೆಗೆ ಇಲಾಖಾ ಸಿಬ್ಬಂದಿಗಳ ಸಮಕ್ಷಮದಲ್ಲಿ ಪಂಚನಾಮೆಯನ್ನು ಜರುಗಿಸಿ ಸದರಿ ತುಂಡುಗಳನ್ನು ಮತ್ತು ವಾಹನವನ್ನು ಅಮಾನತ್ತುಪಡಿಸಿಕೊಂಡಿರುವುದಾಗಿ, ಸದರಿ ಸಮಯದಲ್ಲಿ ಸ್ಥಳೀಯರು ಯಾರೂ ದೊರೆತಿರದ ಕಾರಣ ಅವರ ಇಲಾಖಾ ಸಿಬ್ಬಂದಿಗಳೇ ಪಂಚರಾಗಿ ಸಹಿ ಮಾಡಿರುತ್ತಾರೆಂದು, ನಂತರ ಅಮಾನತ್ತುಪಡಿಸಿಕೊಂಡ ತುಂಡುಗಳನ್ನು ಸದರಿ ವಾಹನದಲ್ಲಿ ಅವರ ಕಛೇರಿ ಆವರಣಕ್ಕೆ ತೆಗೆದುಕೊಂಡು ಹೋಗಿರುವುದಾಗಿ ಹಾಗೂ ಪಂಚನಾಮೆಯನ್ನು ಅವರೇ ಬರೆದಿರುವುದಾಗಿ ಸಾಕ್ಷ್ಯ ನುಡಿದಿರುತ್ತಾರೆ. ಇದಕ್ಕೆ ನೀವು ಏನು ಹೇಳುವಿರಿ?
ಉಃ

ಪ್ರ:16: ಫ್ರಾಸಾ-5, ಮೊಹಮದ್ ಶಫಿ, ವಲಯ ಅರಣ್ಯಾಧಿಕಾರಿ, ಇವರು ತಮ್ಮ ಸಾಕ್ಷ್ಯದಲ್ಲಿ ದಿಃ16-06-2016 ರಂದು ವಲಯ ಅರಣ್ಯಾಧಿಕಾರಿ, ಮುಂಡಗದ್ದೆ ವಲಯ, ರವರು ಎಫ್.ಓ.ಸಿ. ಸಂಖ್ಯೆ:01/2016-17 ರಲ್ಲಿ ಅಮಾನತ್ತುಪಡಿಸಿಕೊಂಡ ಮುದ್ದೆಮಾಲುಗಳನ್ನು ಪರಿಶೀಲಿಸಿ ದೃಢೀಕರಣ ಪತ್ರವನ್ನು ನೀಡುವಂತೆ

ಕೋರಿಕೊಂಡಿದ್ದು ಅದರಂತೆ ಅವರು ದಿಃ15-09-2016 ರಂದು ಮಂಡಗದ್ದೆ ವಲಯದ ಅರಣ್ಯ ಕಛೇರಿಗೆ ಭೇಟಿ ನೀಡಿ ಸದರಿ ಪ್ರಕರಣದಲ್ಲಿ ವಶಪಡಿಸಿಕೊಂಡ ಮುದ್ದೆಮಾಲುಗಳನ್ನು ಪರಿಶೀಲಿಸಿದಾಗ 29 ತುಂಡುಗಳಿದ್ದು ಸದರಿ ತುಂಡುಗಳನ್ನು ಪರಿಶೀಲಿಸಿ ನೋಡಲಾಗಿ ಅದರ ಬಣ್ಣ ಮತ್ತು ಗುಣಧರ್ಮದ ಆಧಾರದ ಮೇಲೆ ಸದರಿ ತುಂಡುಗಳು ಬೀಟೆ ತುಂಡುಗಳು ಎಂದು ತಿಳಿದುಕೊಂಡು ದೃಢೀಕರಣ ಪತ್ರವನ್ನು ನೀಡಿರುವುದಾಗಿ ಹಾಗೂ ಮರದ ತುಂಡುಗಳನ್ನು ಪರಿಶೀಲಿಸುವ ಸಂಬಂಧವಾಗಿ ಅವರು 02 ವರ್ಷದ ವಿಶೇಷ ತರಭೇತಿಯನ್ನು ಪಡೆದುಕೊಂಡಿರುತ್ತಾರೆಂದು ಸಾಕ್ಷ್ಯ ನುಡಿದಿರುತ್ತಾರೆ. ಇದಕ್ಕೆ ನೀವು ಏನು ಹೇಳುವಿರಿ?
ಉಃ

ಪ್ರ:17: ಫ್ರಾಸಾ-4, ಮಂಜುನಾಥ.ಆರ್.ಟಿ., ವಲಯ ಅರಣ್ಯಾಧಿಕಾರಿ, ಇವರು ತಮ್ಮ ಸಾಕ್ಷ್ಯದಲ್ಲಿ ದಿಃ04-04-2016 ರಂದು ಚಾಸಾ-1 ರಿಂದ 5 ರವರು ಕಿಕ್ಕೇರಿ ಗ್ರಾಮದ ಸರ್ವೆ ನಂ.35/2 ರ ಉಬ್ಬೂರು ಮೀಸಲು ಅರಣ್ಯದಲ್ಲಿ 02 ಬೀಟೆ ಮರಗಳನ್ನು ಕಡಿತಲೆ ಮಾಡಿದ ಸಂಬಂಧವಾಗಿ 24 ತುಂಡುಗಳನ್ನು ಲಾರಿಯೊಂದಿಗೆ ತೆಗೆದುಕೊಂಡು ಬಂದು ಅವರ ಮುಂದೆ ಹಾಜರುಪಡಿಸಿರುತ್ತಾರೆಂದು, ನಂತರ ಚಾಸಾ-1 ರವರು ಪ್ರಕರಣ ದಾಖಲಿಸಿ ವರದಿಯೊಂದಿಗೆ ಪಂಚನಾಮೆಯನ್ನು ಅವರಿಗೆ ನೀಡಿರುತ್ತಾರೆಂದು, ದಿಃ05-04-2016 ರಂದು ಚಾಸಾ-1 ರವರು ಮೇಲೆ ಹೇಳಿದ ಸ್ಥಳದಲ್ಲಿ 05 ನಾಟಾಗಳನ್ನು ವಶಪಡಿಸಿಕೊಂಡು ಸ್ಥಳ ಪಂಚನಾಮೆಯೊಂದಿಗೆ ಅವರ ಮುಂದೆ ಹಾಜರುಡಿಸಿರುತ್ತಾರೆಂದು ಸಾಕ್ಷ್ಯನುಡಿದಿರುತ್ತಾರೆ. ಇದಕ್ಕೆ ನೀವು ಏನು ಹೇಳುವಿರಿ?
ಉಃ

ಪ್ರ:18: ಫ್ರಾಸಾ-4 ರವರು ಮುಂದುವರೆದು ತಮ್ಮ ಸಾಕ್ಷ್ಯದಲ್ಲಿ ನಂತರ ಈ ಪ್ರಕರಣದ ತನಿಖೆಯನ್ನು ಮುಂದುವರೆಸಿ ಚಾಸಾ-6 ರವರನ್ನು ಅವರ ಕಛೇರಿಗೆ ಕರೆಸಿ ನಾಟಾ ತುಂಡುಗಳ ದೃಢೀಕರಣ ಪತ್ರವನ್ನು ನೀಡುವಂತೆ ಕೋರಿಕೊಂಡಿದ್ದು, ಸದರಿ ಚಾಸಾ-6 ರವರು ಈ ಪ್ರಕರಣದಲ್ಲಿ ವಶಪಡಿಸಿಕೊಂಡಿದ್ದ ತುಂಡುಗಳನ್ನು ಪರಿಶೀಲಿಸಿ ದೃಢೀಕರಣವನ್ನು ನೀಡಿರುತ್ತಾರೆಂದು, ಈ ಪ್ರಕರಣದಲ್ಲಿ ಆರೋಪಿಗಳ ಬಗ್ಗೆ ಅವರಿಗೆ ಸುಳಿವು ದೊರೆತಿರುವುದಿಲ್ಲವೆಂದು ನಂತರ ಈ ಪ್ರಕರಣ ದಾಖಲಿಸುವ ಸಂದರ್ಭದಲ್ಲಿ ಲಾರಿಯಲ್ಲಿ ದೊರೆತ ಬಿ-ಎಕ್ಸ್ಟ್ರಾಕ್ಟ್ ದಾಖಲಾತಿಯ ಆಧಾರದ ಮೇಲೆ ಈ ಪ್ರಕರಣದ ಆರೋಪಿಯಾದ ನಿಮ್ಮ ವಿರುದ್ಧ ತನಿಖೆಯನ್ನು ಕೈಗೊಂಡು ಸದರಿ ತನಿಖೆಯಲ್ಲಿ ಆರೋಪಿಯಾದ ನಿಮ್ಮ ವಿರುದ್ಧ ಆರೋಪಗಳು ಸಾಭೀತಾದ ಕಾರಣ ನಿಮ್ಮ ವಿರುದ್ಧ ದೋಷಾರೋಪಣೆ ಪಟ್ಟಿಯನ್ನು ಸಲ್ಲಿಸಿರುವುದಾಗಿ, ಈ ಪ್ರಕರಣ ದಾಖಲಿಸುವ ಸಂದರ್ಭದಲ್ಲಿ ಓಡಿ ಹೋದ 05 ಜನರ ಮಾಹಿತಿ ದೊರೆತಿರುವುದಿಲ್ಲದಿದ್ದರಿಂದ ಅವರುಗಳ ವಿರುದ್ಧ ದೋಷಾರೋಪಣೆ ಪಟ್ಟಿಯನ್ನು ಸಲ್ಲಿಸಿರುವುದಿಲ್ಲವೆಂದು ಸಾಕ್ಷ್ಯ ನುಡಿದಿರುತ್ತಾರೆ. ಇದಕ್ಕೆ ನೀವು ಏನು ಹೇಳುವಿರಿ?
ಉಃ

ಪ್ರ:19: ಈ ಪ್ರಕರಣದ ವಿಚಾರವಾಗಿ ಏನಾದರೂ ಹೇಳುವುದು ಇದೆಯೆ?
ಉಃ

ಪ್ರ:20: ನಿಮ್ಮ ಪರವಾಗಿ ಯಾವುದಾದರೂ ಸಾಕ್ಷಿ ಅಥವಾ ದಾಖಲೆಗಳನ್ನು ಹಾಜರುಪಡಿಸುತ್ತೀರಾ?
ಉಃ

[ಮೇಲ್ಕಂಡ ಆರೋಪಿಯ ಹೇಳಿಕೆಯನ್ನು ನನ್ನ ಸಮಕ್ಷಮದಲ್ಲಿ ತೆರೆದ ನ್ಯಾಯಾಲಯದಲ್ಲಿ ಅವರಿಗೆ ಓದಿ ಹೇಳಿದ ನಂತರ ಉತ್ತರಗಳನ್ನು ಅವರು ಹೇಳಿದಂತೆ ದಾಖಲಿಸಿದೆ ಎಂದು ಈ ಮೂಲಕ ದೃಢೀಕರಿಸುತ್ತೇನೆ.]

ದಿಃ

1 ನೇ ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು ಪ್ರ.ದ.ನ್ಯಾದಂ.,
ತೀರ್ಥಹಳ್ಳಿ